ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್ ಅವರು ಸಾರ್ವಜನಿಕ ಕ್ಷೇತ್ರಕ್ಕೆ ಲಗತ್ತಿಸಿದಂತೆ ಏನೋ ಹೇಳುತ್ತಿದ್ದಾರೆ. ಹೇಳಲಿ ಬಿಡಿ. ನಿಮ್ಮದು ಏನಾದರೂ ಹೇಳುವುದು ಇದ್ದರೆ ನಿಮಗೂ ಅವಕಾಶ ಕೊಡುತ್ತೇನೆ. ನೆಕ್ಸ್ಟ್ ನಿಮ್ಮನ್ನು ಕರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಬಿಳಿಗಿರಿರಂಗನ ಬೆಟ್ಟ ಇವರಿಗೆ ಸೇರುತ್ತದೆ. ಅವರು ಇದರ ಬಗ್ಗೆ ಮಾತನ್ನೇ ಆಡಿಲ್ಲ.

ಅಧ್ಯಕ್ಷರು: ಅದನ್ನು ಬಿಟ್ಟು ಬಿಡಿ.

ಶ್ರೀ ವಾಟಾಳ್ ನಾಗರಾಜ್: ಬೆಲ್ಲತ್ತ ಜಲಾಶಯ ಹಾಗೂ ಕೃಷ್ಣಯ್ಯನ ಕಟ್ಟೆ ಜಲಾಶಯ ಅಪಾಯದ ಅಂಚಿನಲ್ಲಿದೆ ಎಂದು ತಿಳಿಸಿದ್ದೇನೆ. ಸರ್ಕಾರ ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ?

ಅಧ್ಯಕ್ಷರು: ಅದನ್ನು ಕಳಿಸಿಕೊಡಿ. ಮಾನ್ಯ ವೆಂಕಟೇಶ್ ಕಲ್ಲಿನ ಬಗ್ಗೆ ವಿಚಾರವನ್ನು ಹೇಳಿ..

ಶ್ರೀ ಎಂ.ಪಿ. ವೆಂಕಟೇಶ್: ಕಲ್ಲಿನ ವಿಚಾರ ಅಲ್ಲ. ನಮ್ಮ ಕಬಿನಿ ಜಲಾಶಯದಲ್ಲಿ ರೈಟ್ ಬ್ಯಾಂಕ್‌ನಲ್ಲಿ ಎಂಬ್ಯಾಂಕ್‌ಮೆಂಟ್ ಒಡೆದು ಹೋಗುತ್ತಿದೆ. ನೀರು ಬಿಡುವುದಕ್ಕೆ ನಂಜನಗೂಡು ತಾಲ್ಲೂಕಿನ ರೈತರು ಒತ್ತಾಯ ಮಾಡಿದ ಮೇರೆಗೆ ಸರ್ಕಾರ ಆದೇಶ ಕೊಟ್ಟ ಮೇರೆಗೆ ಇವತ್ತು ನೀರು ಬಿಡುತ್ತಿದ್ದಾರೆ. ಕಬಿನಿ ಜಲಾಶಯದಲ್ಲಿ ಎಂಬ್ಯಾಂಕ್‌ಮೆಂಟ್ ಒಡೆದು ಗ್ರಾಮಗಳಿಗೆ ನೀರು ನುಗ್ಗುವ ಸಂಭವ ಇದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಜವಾಬ್ದಾರಿ ತೆಗೆದುಕೊಂಡು ರಾತ್ರಿ ಹಗಲು ಮಣ್ಣು ಹಾಕಿ, ಸಿಮೆಂಟ್ ಹಾಕಿ ಜವಾಬ್ದಾರಿಯನ್ನು ಇಟ್ಟುಕೊಂಡಿದ್ದಾರೆ. ಈ ಸಾರಿ ನೀರು ಕೊಡುವಂತಹ ಕಾಲದಲ್ಲಿ ನೀರು ಬಿಟ್ಟರೆ ಎಂಬ್ಯಾಂಕ್‌ಮೆಂಟ್ ಒಡೆಯುವ ಸಂಭವ ಇದೆ. ಆದ್ದರಿಂದ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡಿ ಇದನ್ನು ರಿಪೇರಿ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಸುಮಾರು 20-30 ಹಳ್ಳಿಗಳು ಮುಳುಗಿ ಹೋಗುವಂತಹ ಸಂದರ್ಭ ಬರುತ್ತದೆ, ಇಂತಹ ಸಂದರ್ಭ ಬಂದು ತೊಂದರೆ ಬರುತ್ತದೆ.

2) ಶಿವಮೊಗ್ಗ ಬಸ್ ನಿಲ್ದಾಣದ ಕೆಲಸವನ್ನು ಪೂರ್ತಿ ಮಾಡುವುದು.

ಶ್ರೀ ಕೆ.ಎಸ್. ಈಶ್ವರಪ್ಪ: ಇಂದು ಮಾರ್ಚ್ 27ನೇ ತಾರೀಖು. ಸದನದ ಕೊನೆ ದಿನಕ್ಕೆ ನಾವು ಇವತ್ತು ಸೇರುತ್ತಿದ್ದೇವೆ. ಶಿವಮೊಗ್ಗದಲ್ಲಿ ಬಸ್ ಸ್ಟ್ಯಾಂಡನ್ನು ಮಾರ್ಚ್ 30, 1991ರೊಳಗೆ ಕೆಲಸ ಮುಗಿಸಿಬಿಡುತ್ತೇವೆ ಎಂದು ನನಗೆ ಮಂತ್ರಿಗಳಿಂದ ಉತ್ತರ ಬಂದಿದೆ. ಇವರು ಬಸ್ ಸ್ಟ್ಯಾಂಡೇ ಮುಗಿಸಿಬಿಡುತ್ತಾರೇನೋ ಎಂದು ನನಗೆ ಭಯ ಆಗುತ್ತದೆ. ಏಕೆಂದರೆ ಇನ್ನು ಮೂರು ದಿನ ಇದೆ. ಅಲ್ಲಿ ಇನ್ನು ಕೆಲಸ ಶುರು ಆಗಿಲ್ಲ. ಕನಿಷ್ಟ ಅಂದರೂ ಕೂಡ ಇನ್ನೂ ಒಂದು ಒಂದೂವರೆ ತಿಂಗಳು ಮಾಡುವಷ್ಟು ಕೆಲಸ ಅಲ್ಲಿ ಉಳಿದಿದೆ. ಈ ಸದನದಲ್ಲಿ ಸತ್ಯಕ್ಕೆ ದೂರವಾದ ಉತ್ತರ ಕೊಡುತ್ತಿದ್ದಾರೆ. ಮೂರು ಸಾರಿ ಉತ್ತರ ಕೊಟ್ಟಿದ್ದಾರೆ, ಮೂರು ಸಾರಿ ಕೂಡ ಈ ರೀತಿ ಆಗಿದೆ. ತಮ್ಮ ಗಮನಕ್ಕೂ ನಾನು ತಂದಿದ್ದೇನೆ. ಈ ರೀತಿ ಆದರೆ ಶಿವಮೊಗ್ಗದ ಜನರಿಗೆ ಏನು ಉತ್ತರ ಕೊಡುವುದು. ಅಲ್ಲಿ ಏನೇನೂ ಕೆಲಸ ಆಗುತ್ತಿಲ್ಲ. ಸರಿಯಾಗಿ ಹೆಣ್ಣು ಮಕ್ಕಳಿಗೆ ಕಕ್ಕಸ್ಸು ಇಲ್ಲ, ತುಂಬಾ ತೊಂದರೆ ಆಗುತ್ತಿದೆ. ಸರ್ಕಾರದ ಗಮನಕ್ಕೆ ತಂದು ತಂದು ಸಾಕಾಗಿದೆ. ಅದಕ್ಕೋಸ್ಕರವಾಗಿ ನಾನು ಶಿವಮೊಗ್ಗದ ಜನಕ್ಕೆ ಇಲ್ಲಿಂದಲೇ ಕರೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನು ಮಾರ್ಚ್ 30ನೇ ತಾರೀಖು ಕೊನೆ ದಿನ ಎಂದು ಹೇಳಿದ್ದೀರಿ. ಅದರ ಪ್ರಕಾರ ನಡೆದು ಕೊಳ್ಳುವುದೇ ಇರುವುದರಿಂದ ಚಳುವಳಿ ಒಂದೇ ದಾರಿ ಉಳಿದಿರುವುದು. ರಸ್ತೆ ರೋಕೋ ಕಾರ್ಯಕ್ರಮವನ್ನು ಮಾರ್ಚ್ 30ನೇ ತಾರೀಖು ಮಾಡಿಯೇ ಮಾಡುತ್ತೇವೆಂದು

ಸರ್ಕಾರಕ್ಕೆ ಈ ಮೂಲಕ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಏನಾದರೂ ಇದಕ್ಕೆ ಉತ್ತರ ಕೊಡುತ್ತಾರೆಯೇ ಎಂದು ತಮ್ಮ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮೂರು ದಿನ ಉಳಿದಿದೆ. ಈ ರೀತಿ ಸತ್ಯಕ್ಕೆ ದೂರವಾದ ಉತ್ತರ ಕೊಟ್ಟರೆ ನಾವು ಯಾರ ಹತ್ತಿರ ಹೋಗಿ ಕೇಳುವುದು, ಯಾರ ಹತ್ತಿರ ಹೋಗಬೇಕೆಂದು ಒಂದೂ ಅರ್ಥ ಆಗುತ್ತಿಲ್ಲ.

ಅಧ್ಯಕ್ಷರು: ಪ್ರಿವಿಲೇಜ್ ಮೋಷನ್ ಮೂವ್ ಮಾಡಿ.

ಶ್ರೀ ಜಿ.ಬಿ. ಈಶ್ವರಪ್ಪ: ಆಯಿತು.

ಶ್ರೀ ವಾಟಾಳ್ ನಾಗರಾಜ್: ನಾನು ಹೇಳಿದ್ದಕ್ಕೂ ಸರ್ಕಾರದಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು: ಕೊಡುತ್ತಾರೆ. ನೀವು ಕಳಿಸಿಕೊಡಿ. ಈಗ ತಾನೇ ರೈಸ್ ಮಾಡಿದ್ದೀರಿ. ಪತ್ರಿಕೆ ಈಗ ತಾನೇ ಅವರ ಕೈ ಸೇರಿದೆ.

ಶ್ರೀ ವಾಟಾಳ್ ನಾಗರಾಜ್: ಇನ್ನೂ ಕೊಟ್ಟಿಲ್ಲ..

ಅಧ್ಯಕ್ಷರು: ನೀವೇ ಇಟ್ಟುಕೊಂಡಿದ್ದೀರಿ, ನಾನು ಆಗಲೇ ಹೇಳಿದ್ದೇನೆ ಕಳಿಸಿಕೊಡಿ ಎಂದು.

ಶ್ರೀ ವಾಟಾಳ್ ನಾಗರಾಜ್: ಅದರ ಜೊತೆಯಲ್ಲಿ.

ಅಧ್ಯಕ್ಷರು: ಅದರ ಜೊತೆಯಲ್ಲಿಯೇ ಕಳಿಸಿಕೊಡಿ..

ಶ್ರೀ ವಾಟಾಳ್ ನಾಗರಾಜ್: ಮೈಸೂರು ಮಿನರಲ್ ಸಂಸ್ಥೆ ಬಗ್ಗೆಯೂ ಸಹ ನಾನು ಚರ್ಚೆ ಮಾಡಿದ್ದೇನೆ. ಅದರ ಬಗ್ಗೆ ಉತ್ತರ ಕೊಡುತ್ತೇನೆಂದು ಹೇಳಿದ್ದರು. ಇದುವರೆಗೆ ಕೊಟ್ಟಿಲ್ಲ. ಮೈಸೂರು ಮಿನರಲ್ಸ್‌ನ ಅನೇಕ ಅಧಿಕಾರಿಗಳ ಬಗ್ಗೆ ಭ್ರಷ್ಟಾಚಾರದ ಆರೋಪಣೆ ಇದೆ. ಅವರನ್ನು ಮತ್ತೆ ಅಧಿಕಾರಸ್ಥರನ್ನಾಗಿ ಮಾಡುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ನಾನು ಒಂದು ಸುದೀರ್ಘವಾದ ನ್ಯಾಯಾಂಗ ತನಿಖೆ ಆಗಬೇಕು ಎಂದು ಈ ಸಭೆಯಲ್ಲಿ ಹತ್ತಾರು ಬಾರಿ ಹೇಳಿದೆ. ಈ ಕ್ಷಣದವರೆಗೆ ಏನೂ ಉತ್ತರ ಬರಲಿಲ್ಲ, ಏನೂ ವ್ಯವಸ್ಥೆ ಮಾಡಿಲ್ಲ. ಮೈಸೂರು ಮಿನರಲ್ ಸಂಸ್ಥೆ ದೊಡ್ಡ ಸಂಸ್ಥೆ. ನಮ್ಮ ಸರ್ಕಾರದ ಅಧೀನದಲ್ಲಿರತಕ್ಕ ಸಂಸ್ಥೆ. ಇಲ್ಲಿ ಎಷ್ಟು ಅನ್ಯಾಯ ನಡೆದಿದೆ, ಭ್ರಷ್ಟಾಚಾರ ನಡೆದಿದೆ, ಲೂಟಿ ಆಗಿದೆ. ಅನೇಕ ಅಧಿಕಾರಿಗಳ ಮೇಲೆ ಲೋಕಾಯುಕ್ತದ ತನಿಖೆ ಆಗುತ್ತದೆ. ಇವರನ್ನೆಲ್ಲಾ ಮತ್ತೆ ಅಧಿಕಾರಕ್ಕೆ ತರಬೇಕೆಂದು ಒಂದು ಸಂಚು ನಡೆಯುತ್ತಾ ಇದೆ. ಅಂಥದ್ದರಲ್ಲಿ ಇದರ ಬಗ್ಗೆ ಇನ್ನೂ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು: ಅದನ್ನು ಕಳಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್ಕಾರಕ್ಕೆ ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಮಾನ್ಯ ಕಂದಾಯ ಸಚಿವರು ಶಿವಮೊಗ್ಗ ಜಿಲ್ಲೆಗೆ ಬಂದಾಗ ಸಹ ಶಿಕಾರಿಪುರ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿ ದೃಷ್ಟಿಯಿಂದ ಕೆಲವು ಕೆಲಸವನ್ನು ಜಿಲ್ಲಾಧಿಕಾರಿಗಳು ಸಭೆ ಕರೆದು ಮಂಜೂರು ಮಾಡಿ ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳಿದ್ದರು. ಲಿಖಿತ ಮೂಲಕ ಆದೇಶ ಕೊಟ್ಟರು. ನಾನು ಹತ್ತಾರು ಬಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದರಂತೆ ಸಂಬಂಧಪಟ್ಟ ಇಲಾಖೆಯವರು ಕೆಲಸ ಮಾಡಿದ್ದರು. ಕಳೆದ ಒಂದು ಒಂದೂವರೆ ತಿಂಗಳಿಂದ ಈಗ ಸುಮಾರು ಎರಡು ತಿಂಗಳ ಹತ್ತಿರಕ್ಕೆ ಬರುತ್ತದೆ. ಸುಮಾರು 16-17 ಲಕ್ಷ ಕೆಲಸ ಮಾಡಿದಂತಹ ದುಡ್ಡಿನ ಪೇಮೆಂಟ್ ಆಗಿಲ್ಲ. ಅರ್ಧಂಬರ್ಧ ದುಡ್ಡು ಕೊಟ್ಟಿದ್ದಾರೆ, ಕೃಷಿ ಕಾರ್ಮಿಕರಿಗೆ ದುಡ್ಡು ಕೊಟ್ಟಿಲ್ಲ, ಹೊಸದಾಗಿ ಕೆಲಸವು ಪ್ರಾರಂಭವಾಗಿಲ್ಲ. ಇಡೀ ನಮ್ಮ ಜಿಲ್ಲೆಯಲ್ಲಿ ಅತ್ಯಂತ

ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕು ಎಂದರೆ ಶಿಕಾರಿಪುರ ತಾಲ್ಲೂಕು. ನಾನು ಇವ್ಯೆ ಕೂಡ ಎಲ್ಲಾ ಅಧಿಕಾರಿಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಏನಾದರೂ ಹಣವನ್ನು ಬಿಡುಗಡೆ ಮಾಡುತ್ತೀರ ಎಂದು ಕೇಳಿದ್ದೇನೆ ಇಲ್ಲ ಸ್ವಾಮಿ ಎಂದು ಹೇಳುತ್ತಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಹೊಸದಾಗಿ ಬರಗಾಲ ಕಾಮಗಾರಿಗಳನ್ನು ಪ್ರಾರಂಭ ಮಾಡುವುದು ಬೇಡ. ಅದನ್ನು ಜನರೇ ತೀರ್ಮಾನ ಮಾಡಲಿ. ಕೊನೆಯ ಪಕ್ಷ ಸರಕಾರದ ಆದೇಶದ ಪ್ರಕಾರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸಭೆ ಮಾಡಿ ಕೆಲಸವನ್ನು ಅರ್ಧವಾದುದನ್ನು ಮುಂದುವರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಬೇಕು. ಹಾಗೆ ದುಡ್ಡನ್ನು ಕೊಡದಿದ್ದರೆ ಜನರು ಬೀದಿಪಾಲಾಗುತ್ತರೆ, ತುಂಬಾ ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆ. ನಾನು ಹೊಸದಾಗಿ ಕೆಲಸ ಮಾಡುವುದಕ್ಕೆ ಒತ್ತಾಯವನ್ನು ತರುತ್ತಾ ಇಲ್ಲ, ಮಾಡಿರುವ ಕೆಲಸ ಯಾವುದು ಅರ್ಧಕ್ಕೆ ನಿಂತಿದೆ ಅದಕ್ಕಾದರೂ ಹಣವನ್ನು ಕೊಡುವುದಕ್ಕೆ ಸರಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ತಿಳಿಯ ಬಯಸುತ್ತೇನೆ. ಅದುದರಿಂದ ಸಂಬಂಧಪಟ್ಟ ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ಹೇಳಿ ಮತ್ತು ಹಣ ಬಿಡುಗಡೆ ಮಾಡಲು ಕ್ರಮವನ್ನು ಕೂಡ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಈ ಬಗ್ಗೆ ರಕ್ಷಣೆ ಕೋರಿ ವಿನಂತಿಸಿಕೊಳ್ಳುತ್ತೇನೆ.

3) ಕೊಪ್ಪಳವನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ದಿವಟರ್: ಮಾನ್ಯ ಅಧ್ಯಕ್ಷರೆ, ಕಳೆದ 26 ದಿವಸಗಳಿಂದ ಕೊಪ್ಪಳವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಹೇಳಿ, ಅಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆದಿದೆ.

ಅಧ್ಯಕ್ಷರು: ಮಾನ್ಯ ಕೊಪ್ಪಳದ ಸದಸ್ಯರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಆ ಬಗ್ಗೆ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ದಿವಟರ್: ಅಲ್ಲಿ ಸತ್ಯಾಗ್ರಹ ನಡೆದಿದೆ..

ಅಧ್ಯಕ್ಷರು: ಸತ್ಯಾಗ್ರಹವನ್ನು ಮುಗಿಸಲು ನೀವು ಒಂದು ಕರೆ ಕೊಡಿ. ಈಗ ಯಾವ ಜಿಲ್ಲೆಯನ್ನೂ ಹೊಸದಾಗಿ ಮಾಡುವುದಿಲ್ಲವಂತೆ ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ದಿವಟರ್: ಅವರುಗಳು ನನ್ನ ಮಾತನ್ನು ಈ ಸಾರಿ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಸರಕಾರದವರು ಅವರಿಗೆ ಏನಾದರೂ ಹೇಳ ಬೇಕು. ಒಂದು ಉತ್ತರವನ್ನು ಅವರಿಗೆ ಕೊಡಬೇಕು.

ಅಧ್ಯಕ್ಷರು: ಸರಕಾರದವರು ಹೇಳುವುದು ಇನ್ನೂ ಏನೂ ಆ ಬಗ್ಗೆ ಉಳಿದಿಲ್ಲ. ಸರಕಾರದವರು ಉತ್ತರವನ್ನು ಹೇಳಿ ಆಗಿದೆ.

ಶ್ರೀ ಮಲ್ಲಿಕಾರ್ಜುನ ದಿವಟರ್: ಗಡ್ಡೀಗೌಡರ ಕಮಿಟಿಯಲ್ಲಿ ಕೊಪ್ಪಳವನ್ನು ಜಿಲ್ಲೆ ಮಾಡಬೇಕೆಂದು ಇದೆ. ಆ ವರದಿಯನ್ನು ನಾವು ಜಾರಿ ಮಾಡುತ್ತೇವೆ,ಉಳಿದ ಜಿಲ್ಲೆಗಳನ್ನು ಹೊಸದಾಗಿ ಮಾಡುವಾಗ ಕೊಪ್ಪಳವನ್ನು ಕೂಡ ಮಾಡುತ್ತೇವೆ ಎಂದು ಹೇಳ ಬೇಕು.

ಅಧ್ಯಕ್ಷರು: ಇಲ್ಲ, ನಾನು ಅವರ ಪರವಾಗಿ ಹೇಳುತ್ತೇನೆ, ಇದನ್ನೆಲ್ಲಾ ಕೂಲಂಕಷವಾಗಿ ಸರಕಾರದವರು ಪರಿಶೀಲನೆ ಮಾಡುತ್ತಾರೆ. ಹೀಗೆ ಅವರಿಗೆ ಹೇಳಿ, ಸತ್ಯಾಗ್ರಹವನ್ನು ನಿಲ್ಲಿಸಲಿಕ್ಕೆ ತಾವುಗಳು ಹೇಳಿ.

ಶ್ರೀ ಮಲ್ಲಿಕಾರ್ಜುನ ದಿವಟರ್: ಕೊಪ್ಪಳವನ್ನು ಗದಗ್‌ಗೆ ಸೇರಿಸುತ್ತಾರೆ, ಕೊಪ್ಪಳ ಜಿಲ್ಲೆಯಾಗಿ ಮಾಡುವುದನ್ನು ಕೈಬಿಡುತ್ತಾರೆ ಎಂಬ ಸಂಶಯ ನನ್ನ ಜನರಿಗೆ ಬಂದಿದೆ. ಅಲ್ಲಿ ಎರಡನೆಯ ಹಂತದ ಹೋರಾಟ ಪ್ರಾರಂಭವಾಗಿದೆ. ಕರ ನಿರಾಕರಣೆ ಮಾಡಬೇಕು